ಚಿತ್ರಮಂದಿರವನ್ನು ತೆಗೆಯುವುದು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ನಾನು ಹೇಳುವುದಿಲ್ಲ. ಆದರೆ ಅದು ಈಗ ಅನಿವಾರ್ಯವಾಗಿದೆ. ಎರಡು ಆಸನಕ್ಕೆ ಒಬ್ಬ ಪ್ರೇಕ್ಷಕ ಕೂಡುವಂತೆ ವ್ಯವಸ್ಥೆ ಮಾಡಬೇಕು ಎಂಬ ಮಾತು ಬಂತು. ಹಾಗೆ ಮಾಡಿದರೆ ನಷ್ಟವಾಗುತ್ತದೆ ಎಂಬ ಮಾತೂ ಬಂತು. ಅಂಥ ಪರಿಸ್ಥಿತಿಯಲ್ಲಿ ಚಿತ್ರಮಂದಿರದವರು ಹೊಂದಾಣಿಕೆ ಮಾಡಿಕೊಳ್ಳಬೇಕು. ಈಗ ಒಂದು ಶೋಗೆ ಅಥವಾ ಒಂದು ವಾರಕ್ಕೆ ಇಷ್ಟು ಎಂದು ಶುಲ್ಕ ವಿಧಿಸಲಾಗುತ್ತದೆ. ಅದಕ್ಕೆ ಸರ್ಕಾರ ಸಹಾಯ ಮಾಡಬಹುದು. ಇದು ವ್ಯವಸ್ಥೆ ಮತ್ತು ಜನರ ನಡುವಿನ ಹೊಂದಾಣಿಕೆಯಿಂದಲೇ ನಡೆಯಬೇಕು. ಬೇರೆ ವಿಧಿಯಿಲ್ಲ.

◆ **ಕೊರೊನಾ ಸಂಕಷ್ಟದಲ್ಲಿ ಚಿತ್ರರಂಗ ಬಳಲಿದೆ. ಜೊತೆಗೆ ಡಬ್ಬಿಂಗ್ ಭೂತವೂ ಕಿರುತೆರೆ ಮತ್ತು ಹಿರಿತೆರೆಗಳಲ್ಲಿ ಬಂದು ಕೂತಿದೆ. ಅದು ತಂದೊಡ್ಡುವ ಸಂಕಷ್ಟಗಳನ್ನು ಎದುರಿಸುವುದು ಹೇಗೆ?**

ಅದು ತುಂಬ ಕಷ್ಟ. ಡಬ್ಬಿಂಗ್‌ಗೆ ಮೊದಲಿನಿಂದಲೂ ತುಂಬ ಬಲವಾಗಿ ವಿರೋಧ ವ್ಯಕ್ತವಾಗಿದ್ದರೆ ಚೆನ್ನಾಗಿತ್ತು. ಆಗ ಬಿಟ್ಟು ಬಿಟ್ಟರು. ಈಗ ಬಂದು ನಾವು ಹೋರಾಡುತ್ತೇವೆ ಅಂತ ಹೊರಟರೆ ತಪ್ಪಾಗುತ್ತದೆ. ನಾನು ತುಂಬಾ ಫ್ರಾಂಕ್. ಯಾವುದನ್ನೂ ಮುಚ್ಚಿಡುವುದು ನನ್ನ ಸ್ವಭಾವವಲ್ಲ. ಹಾಗಾಗಿಯೇ ಇಂಡಸ್ಟ್ರಿಯಲ್ಲಿ ಶಿವಣ್ಣನೇ ಯಾವಾಗಲೂ ಕೆಟ್ಟವನಾಗ್ತಾನೆ. ನನ್ನನ್ನು ಮುಂದೆ ತಳ್ಳುತ್ತಾರೆ.

ಸುಮಾರು ಜನ, 'ಶಿವಣ್ಣನಿಗೆ ಯಾಕೆ ಬೇಕಾಗಿತ್ತು?' ಎನ್ನುತ್ತಾರೆ. ನನಗೊಬ್ಬನಿಗೆ ಏನೂ ಬೇಕಾಗಿಲ್ಲ. ಎಲ್ಲರಿಗೋಸ್ಕರ ನಾನು ಮಾತಾಡಿದ್ದು. ಅವರೆಲ್ಲರಿಗೂ ಅದು ಬೇಡವೆಂದರೆ ನನಗೂ ಬೇಡ ಅಷ್ಟೆ. ಸುಮಾರು ಜನ, 'ಯಾಕಿದ್ರಲ್ಲೆಲ್ಲ ಇನ್ವಾಲ್ವ್ ಆಗಬೇಕು. ನಮಗೇನು ಹಣ ಬರಲ್ವಾ?' ಅಂತ ಕೇಳಿದ್ರು. ಸರಿ, ನಿಮಗೆ ದುಡ್ಡೇ ಮುಖ್ಯ ಅಂತಾದ್ರೆ ಹಾಗೇ ಮಾಡ್ಕೊಳ್ಳಿ. ಅವರೇ ಶುರುಮಾಡಿದ್ದು ಇವನ್ನೆಲ್ಲ. ಈಗಿನ ಪರಿಸ್ಥಿತಿಗೆ ಉತ್ತರವನ್ನೂ ಅವರೇ ಕೊಡಬೇಕು ಅಷ್ಟೆ.

ಕನ್ನಡ ಚಿತ್ರರಂಗ ಈಗಲೂ ತುಂಬ ಸತ್ವಶಾಲಿಯಾಗಿದೆ. ತುಂಬ ಮೌಲ್ಯಯುತವಾದ ಸಿನಿಮಾಗಳು ಬರುತ್ತಿವೆ. ಎಲ್ಲರೂ ತಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಒಳ್ಳೆ ಸಿನಿಮಾಗಳನ್ನು ಕೊಡುತ್ತಿದ್ದಾರೆ. 'ಕೆಜಿಎಫ್'ನಂಥ ದೊಡ್ಡ ಸಿನಿಮಾಗಳು ಬಂದಿವೆ. 'ಲವ್ ಮಾಕ್ಟೇಲ್' ಅಂಥ ಸಿನಿಮಾಗಳೂ ಹಿಟ್ ಆಗಿವೆ. 'ಬೆಲ್ ಬಾಟಂ' ಅಂತ ಒಂದು ಸಿನಿಮಾ ಬಂದು ಕನ್ನಡಕ್ಕೆ ರಿಷಬ್ ಶೆಟ್ಟಿ ಹೀರೊ ಆಗಿ ಪರಿಚಿತರಾಗ್ತಾರೆ. 'ಟಗರು' ಬೇರೆ ಭಾಷೆಯ ಸಿನಿಮಾಗಳನ್ನೂ ಎದುರಿಸಿ ಗೆದ್ದಿಲ್ವಾ? ಅವೆಲ್ಲವೂ ಒಳ್ಳೆಯದೇ ಅಲ್ವಾ? ಎಲ್ಲ ಕಡೆಯಿಂದಲೂ ಒಳ್ಳೆಯ ಪ್ರಯತ್ನಗಳು ನಡೆಯುತ್ತಿವೆ. ಒಂದೇ ವಿಷಯ ಅಂದರೆ ಮಾತಾಡುವುದನ್ನು ಬಿಟ್ಟು ಕೆಲಸ ಮಾಡಬೇಕು ಅಷ್ಟೆ.

◆ **ಕನ್ನಡದ ಸ್ಟಾರ್ ಸಿನಿಮಾಗಳ ಬಜೆಟ್‌ನ ಬಹುಪಾಲು ಸ್ಟಾರ್ ನಟರ ಸಂಭಾವನೆಗೇ ಹೋಗುತ್ತದೆ ಎಂಬ ಮಾತೂ ಇದೆ. ಈ ಸಂಕಷ್ಟದ ಸಂದರ್ಭದಲ್ಲಿ ನಾಯಕನಟರೂ ಕೊಂಚ ಉದಾರಿಗಳಾಗಬೇಕಲ್ವಾ?**

ಖಂಡಿತ. ಆದರೆ ಒಟ್ಟಾರೆ ಹೀಗೆ ಹೇಳುವುದು ತಪ್ಪು. ಇವನ್ನೆಲ್ಲ ಕೂತು ಮಾತಾಡಬೇಕು. ಕೊರೊನಾದಿಂದ ಚಿತ್ರರಂಗ ಸ್ಥಗಿತವಾದ ಕೆಲವೇ ದಿನಗಳಲ್ಲಿ ನಾನು, 'ನಾವು ನಿರ್ಮಾಪಕರ ಹಿತರಕ್ಷಣೆಯನ್ನೂ ಮಾಡಬೇಕು' ಎಂದು ಹೇಳಿದ್ದೆ. ಅದರಲ್ಲಿ ಸಂಭಾವನೆಯ ವಿಷಯವೂ ಬರುತ್ತದೆ. ಅದೇನೂ ದೊಡ್ಡ ವಿಷಯವಲ್ಲ. ಕೂತು ಮಾತಾಡಿ ಬಗೆಹರಿಸಿಕೊಳ್ಳಬೇಕು ಅಷ್ಟೆ.

◆ **ಚಿತ್ರರಂಗದ ಮುಂದಾಳತ್ವ ವಹಿಸಿದವರಾಗಿ ಚಿತ್ರರಂಗಕ್ಕೆ ಏನು ಹೇಳಬಯಸುತ್ತೀರಿ ಮತ್ತು ಚಿತ್ರರಂಗದಿಂದ ಏನನ್ನು ನಿರೀಕ್ಷಿಸುತ್ತೀರಿ?**

ಎಲ್ಲರೂ ಕೈಜೋಡಿಸಬೇಕು. ಎಲ್ಲರೂ ಜೊತೆಯಾಗಬೇಕು. ಕನ್ನಡ ಚಿತ್ರರಂಗ ಯಾವಾಗಲೂ ಸೋತಿಲ್ಲ. ಹಂತದಿಂದ ಹಂತಕ್ಕೆ ಏರುತ್ತಲೇ ಬಂದಿದೆ. ಈ ಸಮಯದಲ್ಲಿ ನಾವು ಜೊತೆಗೆ ನಿಂತು ಚಿತ್ರರಂಗವನ್ನು ಗಟ್ಟಿಯಾಗಿ ನಿಲ್ಲಿಸುವ ಪ್ರಯತ್ನ ಮಾಡಬೇಕು ಅಷ್ಟೆ. ■





ಪೃಥ್ವಿ ಅಂಬರ್

# ಫಾರ್ ರಿಜಿಸ್ಟ್ರೇಷನ್!

ಕನ್ನಡ ಚಿತ್ರರಂಗದಲ್ಲಿ ವಸ್ತು ವಿಷಯಗಳಲ್ಲಿ ಹೊಸತನದ ಹುಡುಕಾಟ ಎಷ್ಟು ನಡೆಯುತ್ತಿದೆಯೋ ಗೊತ್ತಿಲ್ಲ, ಆದರೆ ಸಿನಿಮಾಗಳ ಶೀರ್ಷಿಕೆಯಲ್ಲಿ ಮಾತ್ರ ಭರಪೂರ ಹೊಸತನ ಕಾಣಿಸುತ್ತಿದೆ. ಈ ರೀತಿಯ ವಿಭಿನ್ನ ಟೈಟಲ್‌ಗಳು ಕ್ಲಿಕ್ ಆಗಿರುವ ಉದಾಹರಣೆಗಳೂ ಸಾಕಷ್ಟಿವೆ. ಆದರೆ ಬೋರ್ಡು ಚೆನ್ನಾಗಿದ್ದ ಮಾತ್ರಕ್ಕೆ ಬಸ್ಸಿಗೆ ಜನ ಹತ್ತುವುದಿಲ್ಲ ಅಲ್ಲವೇ? ಸೀಟೂ ಚೆನ್ನಾಗಿರಬೇಕು ಎಂದು ಬಯಸುತ್ತಾರೆ. ಹಾಗೆ ಬೋರ್ಡು ಮತ್ತು ಸೀಟು ಎರಡೂ ಚೆನ್ನಾಗಿರುವ ಸಿನಿಮಾಗಳೂ ಕನ್ನಡದಲ್ಲಿ ಬೆರಳೆಣಿಕೆಯಷ್ಟಾದರೂ ಬರುತ್ತಿವೆಯೆನ್ನಿ.

'ಫಾರ್ ರಿಜಿಸ್ಟ್ರೇಷನ್' ಎಂಬ ಸಿನಿಮಾ ಕೂಡ ಭಿನ್ನ ಶೀರ್ಷಿಕೆಯ ಕಾರಣಕ್ಕೇ ಗಮನಸೆಳೆಯುತ್ತದೆ. ಶೀರ್ಷಿಕೆಯಷ್ಟೇ ಅಲ್ಲ, ಸಿನಿಮಾ ಕೂಡ ಅಷ್ಟೇ ಚೆನ್ನಾಗಿರುತ್ತದೆ ಎಂಬುದು ನಿರ್ದೇಶಕರು ನೀಡುವ ಭರವಸೆ.

ಅಂದಹಾಗೆ, ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿರುವುದು ನವೀನ್ ದ್ವಾರಕಾನಾಥ್. ಇದು ಅವರು ನಿರ್ದೇಶಿಸಿರುವ ಮೊದಲ ಫೀಚರ್ ಫಿಲಂ. ಹಾಗೆಂದು ದೃಶ್ಯ ಮಾಧ್ಯಮ ಇವರಿಗೆ ಹೊಸದೇನೂ ಅಲ್ಲ. ವೃತ್ತಿಯಲ್ಲಿ ಐಟಿ ಉದ್ಯೋಗಿಯಾಗಿರುವ ನವೀನ್ 2005ರಿಂದಲೂ ಕ್ಯಾಮೆರಾ ಒಡನಾಟದಲ್ಲಿದ್ದಾರೆ. 2005ರಲ್ಲಿ 'ದ ಶಾಡೋ' ಎಂಬ ಇಂಗ್ಲಿಷ್ ಕಿರುಚಿತ್ರ ಮಾಡಿದ್ದರು. ಬಹುಬೇಗನೇ ಕನ್ನಡಕ್ಕೆ ಹೊರಳಿದ ಅವರು 2006ರಲ್ಲಿ 'ಅರಿವಿನ ಹಾದಿ' ಎಂಬ ಮೂವತ್ತು ನಿಮಿಷದ ಕನ್ನಡ ಕಿರುಚಿತ್ರ ನಿರ್ದೇಶಿಸಿದರು. ಅದರ ನಂತರವೂ ಹಲವು ಕಿರುಚಿತ್ರ ಮತ್ತು ಮ್ಯೂಸಿಕ್ ಆಲ್ಬಂಗಳನ್ನು ಮಾಡಿದ್ದಾರೆ.



ನವೀನ್ ದ್ವಾರಕಾನಾಥ್

ಆಲಾಪ್ ಕ್ರಿಯೇಷನ್ಸ್ ಎಂಬ ಸ್ವಂತ ಬ್ಯಾನರ್ ಕೂಡ ನವೀನ್ ಪ್ರಾರಂಭಿಸಿದ್ದು, 'ಮಹಾತ್ಮ' ಎಂಬ ಮೈಕ್ರೊ ಮೂವಿಯನ್ನು ನಿರ್ಮಾಣ ಮಾಡಿದ್ದಾರೆ. ಈಗ ಪೂರ್ಣ ಪ್ರಮಾಣದ ಸಿನಿಮಾ ನಿರ್ದೇಶನಕ್ಕೆ ಮುಂದಾಗಿರುವ ಅವರು ತಮ್ಮ ಮೊದಲ ಪ್ರಯತ್ನದಲ್ಲಿ 'ಫಾರ್ ರಿಜಿಸ್ಟ್ರೇಷನ್' ಎಂಬ ಹೆಸರಿನ ರೊಮ್ಯಾಂಟಿಕ್ ಕಾಮಿಡಿ ಕಥೆಯನ್ನು ಹೇಳಲು ಹೊರಟಿದ್ದಾರೆ. ನಿಶ್ಚಲ್ ಫಿಲ್ಮ್ಸ್ ಅಡಿಯಲ್ಲಿ ಎನ್. ನವೀನ್ ರಾವ್ ಇದಕ್ಕೆ ಹಣ ಹೂಡುತ್ತಿದ್ದಾರೆ.

'ದಿಯಾ' ಚಿತ್ರದ ಮೂಲಕ ಗಮನ ಸೆಳೆದಿದ್ದ ಪೃಥ್ವಿ ಅಂಬರ್ ಈ ಚಿತ್ರದ ನಾಯಕ. ತಬಲಾ ನಾಣಿ ಅವರು ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಅಷ್ಟೇ ಅಲ್ಲ, ಚಿತ್ರದ ಸಂಭಾಷಣೆ ಮತ್ತು ಚಿತ್ರಕಥೆಯಲ್ಲಿಯೂ ನವೀನ್ ಜೊತೆಗೆ ಕೈಜೋಡಿಸಿದ್ದಾರೆ. ಚಿತ್ರಕಥೆ ಮತ್ತು ಸಂಭಾಷಣೆ ಮುಗಿದಿದ್ದು, ಚಿತ್ರದ ನಾಯಕಿ ಮತ್ತು ಇತರೆ ಪಾತ್ರಗಳಿಗಾಗಿ ಶೋಧಕಾರ್ಯ ನಡೆದಿದೆ. ವಿವೇಕ್ ಎಸ್‌ಕೆ ಛಾಯಾಗ್ರಹಣ, ಹರೀಶ್ ಆರ್. ಸಂಗೀತ ಈ ಚಿತ್ರಕ್ಕಿದೆ. ಸಕಲೇಶಪುರ, ಮಂಗಳೂರು, ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಸುವ ಯೋಜನೆಯನ್ನು ತಂಡ ಹಾಕಿಕೊಂಡಿದೆ. ■